ತರಬೇಕಾಗಿ ಬಂತು. ಆ ದಿವಸ ಪ್ರಶ್ನೆ ಇತ್ಯರ್ಥವಾಗಲಿಲ್ಲ. ಪದೇ ಪದೇ ಈ ರೀತಿ ಆಗುವುದನ್ನು ತಪ್ಪಿಸಬೇಕೇ ಹೋದರೆ ಭಾರಿ ತೊಂದರೆಯಾಗುತ್ತದೆ. ಇದರಲ್ಲಿ ಮಾಲೀಕರ ಕೈವಾಡ ಇದೆ. ಅವರು ಕೆಲವರನ್ನು ಕೈಯಲ್ಲಿಟ್ಟುಕೊಂಡು ಹೇಗಾದರೂ ಮಾಡಿ ಯೂನಿಯನ್ನನ್ನು ಮುರಿಯಬೇಕು ಎಂದಿರುವುದರಿಂದ ಇದೆಲ್ಲಾ ಆಕೃತ್ಯಗಳಿಗೆ ಕಾರಣವಾಗಿದೆ. ಒಂದು ಕಡೆಯಿಂದ ಪೋಲೀಸರ ರಕ್ಷಣೆ ಬೇಕು. ಇನ್ನೊಂದು ಕಡೆ ಮ್ಯಾನೇಜ್‌ಮೆಂಟಿನವರಿಗೆ ಹೇಳಬೇಕು. ಯಾರೇ ತಪ್ಪು ಮಾಡಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದುವರೆಗೂ ಯಾರ ಮೇಲೂ ಕ್ರಮ ತೆಗೆದು ಕೊಂಡಿಲ್ಲ. ಯಾರನ್ನೂ ಸಸ್ಪೆಂಡ್ ಮಾಡಿಲ್ಲ. ಪೋಲೀಸರು ಕೈಕಟ್ಟಿಕೊಂಡು ಕುಳಿತಿದ್ದಾರೆ. ಇನ್ನೂ ಏನೇನು ಘಟನೆಗಳಾಗುತ್ತದೆಯೋ ಎಷ್ಟು ಕೊಲೆಗಳಾಗುತ್ತದೆಯೋ ಗೊತ್ತಿಲ್ಲ. ಆದ್ದರಿಂದ ತಕ್ಷಣ ಸರ್ಕಾರದವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಪೋಲೀಸರು ಮತ್ತು ಮ್ಯಾನೇಜ್‌ಮೆಂಟಿನವರು ಏನೂ ಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅದರ ವರದಿಯನ್ನು ತರಿಸುತ್ತೇನೆ ಪೋಲಿ ಸರ ರಕ್ಷಣೆ ಕೇಳಿದ್ದಾರೆ ಪರಿಸ್ಥಿತಿ ಏನು ಇದೆ ಅದನ್ನು ಗಮನಿಸಿ ಗಲಾಟೆಗೆ ಅವಕಾಶ ಆಗದ ಹಾಗೆ ನೋಡಿಕೊಳ್ಳುವ ಭರವಸೆ ಯನ್ನು ಕೊಡುತ್ತೇನೆ. ಏನು ಆಗಿದೆ ಎನ್ನುವುದನ್ನು ವರದಿ ತರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳುವ ಬಗ್ಗೆ ಸರ್ಕಾರ ಆದೇಶ ನೀಡುತ್ತದೆ.

ಶ್ರೀ ಹೆಚ್. ಗಂಗಾಧರನ್.—ಮಾಲೀಕರನ್ನು ಕೂಡ ಕರೆಯಿಸಿ ಮಾತನಾಡಬೇಕಾಗುತ್ತದೆ. ಆ ಕಾರ್ಖಾನೆಯವರು ೬೫ ಲಕ್ಷ ರೂಪಾಯಿಗಳ ವಿಲೇವಾರಿ ಚಾರ್ಜಸ್ ಕೊಟ್ಟಿಲ್ಲ. ಮಾಲೀಕರ ಮೇಲೆ ಸರ್ಕಾರ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ದೇಶದಲ್ಲಿರತಕ್ಕಂತ ಆಂಟಿಕ್ಸ್ ಸ್ಮಗಲಿಂಗ್‌ನ್ನು ಈ ಮಾಲೀಕರು ಮಾಡುವ ಬಗ್ಗೆ ಸದಸದಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಉತ್ತರ ವನ್ನೂ ಕೊಟ್ಟಿದ್ದಾರೆ ಇದರ ಬಗ್ಗೆ ತೀವ್ರವಾಗಿ ಗಮನ ಹರಿಸಿ ಕಾರ್ಮಿಕರಿಗೆ ಸೂಕ್ತವಾದ ರಕ್ಷಣೆ ಯನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದೂ ಅಲ್ಲದೆ ಮಾಲೀಕರ ವಿಷಯದಲ್ಲೂ ಕೂಡ ಗಮನ ಹರಿಸದೆ ಇದ್ದರೆ ಕಷ್ಟವಾಗುತ್ತದೆ. ಒಂದು ಕಡೆ ಬರಬೇಕಾಗಿದ್ದ ವರಮಾನ ಬಂದಿಲ್ಲ. ಮತ್ತೊಂದು ಕಡೆ ಕಾರ್ಮಿಕರಿಗೆ ತೊಂದರೆಯಾಗುತ್ತಾ ಇದೆ. ಆದ್ದರಿಂದ ಮಾಲೀಕರನ್ನು ಕರೆಯಿಸಿ ಸರ್ಕಾರವು ಮಾತನಾಡಬೇಕಾಗುತ್ತದೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಒಬ್ಬರ ಕೈಯನ್ನು ಕತ್ತರಿಸಿ ಹಾಕಿದಾಗ ಮಾಲೀ ಕರು ಸುಮ್ಮನೆ ಇದ್ದರೆ ಏನು ರಕ್ಷಣೆ ಇದೆ? ಆದ್ದರಿಂದ ಸರ್ಕಾರದ ಒಂದು ಸ್ಪಷ್ಟವಾದ ನಿಲುವು ಏನೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಿದರೆ ಒಳ್ಳೆಯದು.

Re: Misuse of power by Tahsildar Tumkur Taluk

ಶ್ರೀ ಡಿ. ಧನಂಜಯಕುಮಾರ್.—ತುಮಕೂರು ತಾಲ್ಲೂಕಿನ ಮಲ್ಲಸಂದ್ರ ಗ್ರಾಮದ ರೈಲು ನಿಲ್ದಾಣದ ಬಳಿ ಬೆಲೆ ಬಾಳುವ ಸರ್ಕಾರಿ ಜಮೀನು ಸರ್ವೆ ನಂ. ೧೫೫ರಲ್ಲಿ ೨ ಎಕರೆ ೬ ಗುಂಟೆ ಜಮೀನನ್ನು ಅಲ್ಲಿನ ಗ್ರಾಮ ಲೆಕ್ಕಿಗರಾದ ಪಾಂಡುರಂಗಯ್ಯ ಮತ್ತು ತಹಸೀಲ್ದಾರ್ ಸಿದ್ದಯ್ಯ ನವರು ಶಾಮೀಲಾಗಿ ಹತ್ತಿರದ ಇನ್ನೊಂದು ಗ್ರಾಮ ಹುಚನಹಳ್ಳಿಯ ನಿವಾಸಿ ಹನುಮಂತಯ್ಯ ಎಂಬುವರ ಹೆಸರಿಗೆ ಮಂಜೂರು ಮಾಡಿಸಿ ಮಂಜೂರಾದ ಜಮೀನನ್ನು ಕಳೆದ ವರ್ಷ ಜನವರಿ ೭ನೇ ತಾರೀಖು ತಹಸೀಲ್ದಾರ್ ಅವರ ಹತ್ತಿರವೆ ಸಂಬಂಧಿಯೊಬ್ಬರಿಗೆ ಬರೆಸಿಕೊಂಡಿದ್ದಾರೆ. ಬಹಳ ಜನ ಭೂ ಹೀನರು ಜಮೀನಿಗಾಗಿ ಸಾವಿರಾರು ಅರ್ಜಿಯನ್ನು ಹಾಕಿರತಕ್ಕಂತಹ ಸಂದರ್ಭದಲ್ಲಿ ಅದೂ ಇನ್ನೊಂದು ಗ್ರಾಮದ ಒಬ್ಬ ವ್ಯಕ್ತಿಯ ಹೆಸರಿಗೆ ಜಮೀನನ್ನು ಮಂಜೂರು ಮಾಡಿಸಿಕೊಂಡು ತಹಸೀಲ್ದಾರ್ ಸಂಬಂಧಿಯವರ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸಿಕೊಂಡಿದ್ದಾರೆ. ಇಲ್ಲಿರುವಂತಹ ಬಡವರು ಬೇಸರ ಪಟ್ಟುಕೊಂಡು ಮೇಲಾಧಿಕಾರಿಗಳಿಗೆ ಎಷ್ಟೇ ಮನವಿ ಮಾಡಿಕೊಂಡರೂ ಅದರ ಬಗ್ಗೆ ಇದುವರೆಗೂ ಸರ್ಕಾರದವರು ತನಿಖೆ ಕ್ರಮ ಕೈಗೊಂಡಿಲ್ಲ. ಸ್ಪಷ್ಟವಾದ ವಿಚಾರವೇನೆಂದರೆ ಈ ಸಂಬಂಧಪಟ್ಟ ತಹಸೀಲ್ದಾರ್‌ರವರು ಸುಮಾರು ೩-೪ ತಿಂಗಳ ಹಿಂದೆ ಯಾವುದೋ ಒಂದು ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡು ಅವರನ್ನು ಅಮಾನತ್ತುಗೊಳಿಸಲಾಗಿತ್ತು. ಕೆಲವು ರಾಜಕೀಯ ವ್ಯಕ್ತಿಗಳ ಪ್ರಭಾವ ಮತ್ತು ಒತ್ತಡದಿಂದ ಪುನಃ ಅವರೇ ಅದೇ ಸ್ಥಳಕ್ಕೆ ನೇಮಕಗೊಂಡಿದ್ದಾರೆ. ಇವೊತ್ತು ಅಲ್ಲಿ ಅವರು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ತಮಗೆ ರಾಜಕೀಯ ಮುಖಂಡರ ಬೆಂಬಲ ಇರುವವರೆಗೆ ತಾವು ಮಾಡಿದ್ದೇ ಸರಿ ಎಂಬ ರೀತಿಯಲ್ಲಿ ನಡೆದುಕೊಳ್ಳುತ್ತಿ ದ್ದಾರೆ. ಬಡವರಿಗೆ ಭೂಮಿ ಸಿಕ್ಕುತ್ತಿಲ್ಲ. ಇದರ ಬಗ್ಗೆ ಸರ್ಕಾರ ಗಮನ ಹರಿಸಿ ಸಂಬಂಧಪಟ್ಟ

ತಹಸಿಲ್ದಾರ್ ಮತ್ತು ಗ್ರಾಮ ಲೆಕ್ಕಿಗರನ್ನು ಕೂಡಲೇ ಅಮಾನತ್ತುಗೊಳಿಸಿ ಈ ಬಗ್ಗೆ ವಿವರಣೆ ತರಿಸಿಕೊಂಡು ಅವರುಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಭೂ ಹೀನರಿಗೆ ಜಮೀನನ್ನು ಸರಿಯಾದ ರೀತಿಯಲ್ಲಿ ವಿತರಣೆ ಯಾಗುವಂತಹ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಸಂತರಾವ್ ಎಲ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ವಿಚಾರವಲ್ಲಿ ವರದಿಯನ್ನು ತರಿಸಿಕೊಂಡು ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

Re: Appointment of local persons in New Mangalore port

ಡಾ।। ವಿ.ಎಸ್. ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೆ ನವ ಮಂಗಳೂರು ಬಂದರು ನಮ್ಮ ರಾಜ್ಯದ ಹೆಮ್ಮೆಯ ಬಂದರು. ಅಲ್ಲಿನ ಜನರು ಆ ಬಂದರು ನಿರ್ಮಾಣವಾಗಲಿಕ್ಕೆ ತಮ್ಮ ಜಮೀನು ಮನೆ ಮಠ, ತೋಟ ಮತ್ತು ಕಟ್ಟಡಗಳ ತ್ಯಾಗ ಮಾಡಿ ನಿರ್ಮಾಣಕ್ಕಾಗಿ ಬಹಳ ಶ್ರಮಿಸಿದ್ದಾರೆ. ಇಲ್ಲಿ ಉದ್ಯೋಗ ಕೊಡುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಡಿಸ್‌ಪ್ಲೇಸ್ಡ್ ಪರ್ಸನ್ಸ್ ಮತ್ತು ಸ್ಥಳೀಯರಿಗೆ ಉದ್ಯೋಗವನ್ನು ಕೊಡಬೇಕೆಂದು ಗೃಹ ಇಲಾಖೆಯಿಂದ ಆದೇಶವನ್ನು ಹೊರಡಿಸಿದ್ದಾರೆ. ಈ ಆದೇಶದ ಪ್ರಕಾರ 'ಡೆಕ್ ಹ್ಯಾಂಡ್ಸ್' ೬೦ ಜನ ಅಂದರೆ ಹಡಗಿಗೆ ಸಾಮಾನು ಹೇರುವಂತಹವರ ಹುದ್ದೆಗಾಗಿ ದಿನಾಂಕ ೨೧-೧೧-೮೩ರಂದು ಪ್ರಕಟಣೆ ಹೊರಡಿಸಿದ್ದಾರೆ. ಕೇಂದ್ರ ಸರ್ಕಾರದವರ ಆದೇಶದ ಪ್ರಕಾರ ಸ್ಥಳೀಯ ನಿರ್ವಸತಿಕರಿಗೆ, ಹರಿಜನ ಗಿರಿಜನರಿಗೆ, ಮೀನುಗಾರ ನಿರ್ವಸತಿಕರಿಗೆ ಉದ್ಯೋಗಗಳನ್ನು ಕೊಡಬೇಕಾಗಿತ್ತು. ಈ ಹುದ್ದೆಗಾಗಿ ದಿನಾಂಕ ೫-೨-೮೪ರಂದು ಸಂದರ್ಶನ ಕೂಡ ಆಯಿತು. ಸುಮಾರು ೬೦ ಹುದ್ದೆಗಳಿಗೆ ಸುಮಾರು ೫ ಸಾವಿರ ಅರ್ಜಿಗಳು ಬಂದಿದ್ದವು. ನೇಮಕ ಮಾಡಿದ ಪಟ್ಟಿಯನ್ನು ನಂತರ ನೋಡಿದಾಗ ೬೦ ಹುದ್ದೆಗಳಲ್ಲಿ ಕೇವಲ ೨೩ ಹುದ್ದೆಗಳು ಮಾತ್ರ ನಿರ್ವಸತಿಕರಿಗೆ ಬದಗಿಸಲಾಗಿತ್ತು. ನನ್ನ ಪ್ರಶ್ನೆ ಏನೆಂದರೆ, ಆ ಬಂದರು ಕೇಂದ್ರ ಸರ್ಕಾರಕ್ಕೆ ಒಳಪಟ್ಟಿರಬಹುದು. ಉದ್ಯೋಗವನ್ನು ಕೊಡುವಾಗ ಸ್ಥಳೀಯರಿಗೆ ಮತ್ತು ನಿರ್ವಸತಿಕರಿಗೆ ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಆದ್ಯತೆ ಕೊಡಬೇಕು. ಮೊನ್ನೆ ನಡೆದ ನೇಮಕಾತಿಗಳಲ್ಲಿ ಬೇರೆ ಬೇರೆ ಕಡೆಗಳಿಂದ ಬಂದವರಿಗೆ ಉದ್ಯೋಗವನ್ನು ಒದಗಿಸಲಾಗಿದೆ. ಈ ಬಂದರಿನಲ್ಲಿ ಮೀನುಗಾರರಿಗೆ ಉದ್ಯೋಗ ಕೊಟ್ಟಿಲ್ಲ. ಮೀನುಗಾರರ ಹಿತಾಸಕ್ತಿ ಕಾಪಾಡಲಿಲ್ಲ. ನವ ಮಂಗಳೂರು ಹೊರಗಡೆ ವಾಸಿಸುವ ಶೇಕಡಾ ೭೦ರಷ್ಟು ಹೊರಗಿನವರು ಉದ್ಯೋಗಗಳನ್ನು ಕಬಳಿಸಿಕೊಂಡು ಹೋಗಿದ್ದಾರೆ. ೧೯೭೦ನೇ ಇಸವಿಯಿಂದ ಇಲ್ಲಿ ಅನ್ಯಾಯವಾಗಿದೆ. ಇದನ್ನು ಸರ್ಕಾರ ಗಭೀರವಾಗಿ ಪರಿಗಣಿಸಿಲ್ಲ. ಈಗ ಆಗಿರುವಂತಹ ನೇಮಕ ಪಟ್ಟಿಯನ್ನ ರದ್ದು ಮಾಡಬೇಕು. ನನಗೆ ತಿಳಿದ ಅಂಶಗಳ ಪ್ರಕಾರ ೬೦ ಜನರನ್ನು ನೇಮಕ ಮಾಡಿದಂತಹ ಪಟ್ಟಿಯಲ್ಲಿ ೩೭ ಜನ ಹೊರಗಿನವರೇ ಆಗಿದ್ದಾರೆ. ಆದುದರಿಂದ ಸರ್ಕಾರ ಆ ಪಟ್ಟಿಯನ್ನು ರದ್ದು ಮಾಡಬೇಕು ಮತ್ತು ನಿರ್ವಸತಿಕರಿಗೆ ಉದ್ಯೋಗಗಳನ್ನು ಕೊಡಬೇಕೆಂದು ಪ್ರಭಲವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಡಾ।।ಆಚಾರ್ಯರವರು ಹೇಳಿದಂತಹ ವಿಚಾರದಲ್ಲಿ ನನ್ನ ವ್ಯಾಪ್ತಿಯಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನೆಲ್ಲಾ ಮಾಡುತ್ತೇನೆ.

ಡಾ।।ವಿ.ಎಸ್. ಆಚಾರ್ಯ.—ಈಗ ಇದರಲ್ಲಿ ಬಹಳ ಅನ್ಯಾಯವಾಗಿದೆ ಶೇಕಡಾ ೭೦ರಷ್ಟು ಉದ್ಯೋಗಗಳನ್ನು ಹೊರಗಿನವರೇ ಕಬಳಿಸಿಕೊಂಡಿದ್ದಾರೆ. ನವ ಬಂದರಿನ ಒಳಗೆ ಮತ್ತು ಹೊರಗೆ ೭೦ರಷ್ಟು ಜನ ಬೇರೆ ಬೇರೆ ಕಡೆಗಳಿಂದ ಬಂದವರಾಗಿದ್ದಾರೆ. ಇದರ ಬಗ್ಗೆ ಕೂಡಲೇ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಂತಹ ವಿಷಯವನ್ನು ನಾನು ತಿಳಿದುಕೊಂಡು ನನಗೆ ಇರತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ಏನು ಪರಿಹಾರ ಒದಗಿಸಬೇಕು ಅದನ್ನು ಒದಗಿಸಲು ಪ್ರಯತ್ನ ಮಾಡುತ್ತೇನೆ.

Re: Suicide by two girls belongs to Nirmala convent Mysore

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ 'ನಿರ್ಮಲ' ಕಾನ್ವೆಂಟ್‌ನಲ್ಲಿ ಒಂದು ಅಹಿತರ ಘಟನೆ ನಡೆದಿದೆ. ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕುಮಾರಿ ಆಶಾ